## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಮೀಣ ಜೀವನೋಪಾಯ ಅಭಿಯಾನವು ಒಂದು ದಶಕವನ್ನು ಪೂರ್ಣಗೊಳಿಸಿರುವ ಹಿನ್ನೆಲೆಯಲ್ಲಿ 2022-23 ನೇ ವರ್ಷವನ್ನು **'ಜೀವನೋಪಾಯ ವರ್ಷ' ಎಂದು ಆಚರಿಸುವ ಬಗ್ಗೆ.**

ಉಲ್ಲೇಖ: 2022-23 ನೇ ಸಾಲಿನ ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ.202 ರಲ್ಲಿ ಪ್ರಸ್ತಾಪಿಸಿರುವಂತೆ.

* * * * * *

**ಪ್ರಸ್ತಾವನೆ:**

ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯದ ಪ್ರಮುಖ ಕಾರ್ಯಕ್ರಮಗಳಲ್ಲೊಂದಾದ ದೀನ-ದಯಾಳ್ ಅಂತ್ಯೋದಯ ಯೋಜನೆ-ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದ (ಡೇ-ಎನ್‌ಆರ್‌ಎಲ್‌ಎಂ) ಕಾರ್ಯಕ್ರಮಗಳನ್ನು ರಾಜ್ಯ ಸರ್ಕಾರದ ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗೆ ಒಳಪಡುವ ಸಂಜೀವಿನಿ-ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯು ವಿವಿಧ ಬಗೆಯ ಜೀವನೋಪಾಯಕ್ಕೆ ಸಂಬಂಧಿಸಿದ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದು, ಗ್ರಾಮೀಣ ಭಾಗದ ದುರ್ಬಲ ವರ್ಗದ ಮಹಿಳೆಯರ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗಾಗಿ ಶ್ರಮಿಸಿ ಒಂದು ದಶಕವನ್ನು ಪೂರ್ಣಗೊಳಿಸಿರುವ ಹಿನ್ನೆಲೆಯಲ್ಲಿ 2022-23 ನೇ ವರ್ಷವನ್ನು **'ಜೀವನೋಪಾಯ ವರ್ಷ'** ಎಂದು ಆಚರಿಸಲು ಮಾನ್ಯ ಮುಖ್ಯ ಮಂತ್ರಿಗಳು ಆಯವ್ಯಯ ಭಾಷಣದ ಕಂಡಿಕೆ ಸಂಖ್ಯೆ 202 ರಲ್ಲಿ ಘೋಷಿಸಿರುತ್ತಾರೆ. ಅದರಂತೆ, ಮುಂಬರುವ ದಿನಗಳಲ್ಲಿ ಸರ್ಕಾರದ ವಿವಿಧ ಸಹ ಇಲಾಖೆಗಳು ಮತ್ತು ರಾಜ್ಯದ ಕೃಷಿ, ತೋಟಗಾರಿಕೆ ಹಾಗೂ ಪಶುಪಾಲನಾ ವಿಜ್ಞಾನಗಳ ವಿಶ್ವ ವಿದ್ಯಾನಿಲಯಗಳೊಂದಿಗೆ ಒಗ್ಗೂಡಿಸುವಿಕೆ ಮೂಲಕ ಪರಿಣಾಮಕಾರಿಯಾಗಿ ಮತ್ತು ಗುಣಾತ್ಮಕವಾಗಿ ರಾಜ್ಯದ ಗ್ರಾಮೀಣ ಪ್ರದೇಶದ ಬಡ ಮತ್ತು ಕಡುಬಡ ಮಹಿಳೆಯರ ಜೀವನೋಪಾಯವನ್ನು ವೃದ್ಧಿಸಲು ಅವಶ್ಯವಿರುವ ಯೋಜನೆಗಳನ್ನು ಅನುಷ್ಠಾನಗೊಳಿಸಬೇಕಾಗಿರುವುದರಿಂದ, **2022-23** ನೇ ವರ್ಷವನ್ನು **'ಜೀವನೋಪಾಯ ವರ್ಷ'** ಎಂದು ಆಚರಿಸಲು ಸರ್ಕಾರದ ಆದೇಶ ಹೊರಡಿಸುವಂತೆ ಕೋರಿ ಅಭಿಯಾನ ನಿರ್ದೇಶಕರು, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಇವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ:ಕೌಉಜೀಇ 51 ಉಜೀಇ 2022 ಬೆಂಗಳೂರು, ದಿನಾಂಕ: 12-04-2022**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಸಂಸ್ಥೆಯು ಸರ್ಕಾರದ ವಿವಿಧ ಸಹ ಇಲಾಖೆಗಳು ಮತ್ತು ರಾಜ್ಯದ ಕೃಷಿ, ತೋಟಗಾರಿಕೆ ಹಾಗೂ ಪಶುಪಾಲನಾ ವಿಜ್ಞಾನಗಳ ವಿಶ್ವ ವಿದ್ಯಾನಿಲಯಗಳೊಂದಿಗೆ ಒಗ್ಗೂಡಿಸುವಿಕೆ ಮೂಲಕ ಪರಿಣಾಮಕಾರಿಯಾಗಿ ಮತ್ತು ಗುಣಾತ್ಮಕವಾಗಿ ರಾಜ್ಯದ ಗ್ರಾಮೀಣ ಪ್ರದೇಶದ ಬಡ ಮತ್ತು ಕಡುಬಡ ಮಹಿಳೆಯರ ಜೀವನೋಪಾಯವನ್ನು ವೃದ್ಧಿಸಲು ಅನುಬಂಧದಲ್ಲಿ ವಿವರಿಸಿರುವ ಯೋಜನೆಗಳನ್ನು ರೂ.1100.00 ಕೋಟಿಗಳ ವೆಚ್ಚದಲ್ಲಿ ಅನುಷ್ಠಾನಗೊಳಿಸಲು ಹಾಗೂ **2022-23 ನೇ ವರ್ಷವನ್ನು 'ಜೀವನೋಪಾಯ ವರ್ಷವನ್ನಾಗಿ'** ಆಚರಿಸಲು ಆದೇಶಿಸಿದೆ. (ಆರ್ಥಿಕ ಮತ್ತು ಭೌತಿಕ ಗುರಿಗಳ ವಿವರಗಳನ್ನು ಅನುಬಂಧದಲ್ಲಿರಿಸಿದೆ)

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

12/04/2022

(ರಂಗನಾಥ)
**ಸರ್ಕಾರದ ಅಧೀನ ಕಾರ್ಯದರ್ಶಿ,**
ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು
ಜೀವನೋಪಾಯ ಇಲಾಖೆ.

**ಇವರಿಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಿ 10 ಪ್ರತಿಗಳನ್ನು ಸರಬರಾಜು ಮಾಡಲು ಕೋರಿದೆ.

**ಪ್ರತಿಗಳನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ:–**

1. ಅಭಿಯಾನ ನಿರ್ದೇಶಕರು, ಸಂಜೀವಿನಿ–ಕೆಎಸ್‌ಆರ್‌ಎಲ್‌ಪಿಎಸ್, ಬೆಂಗಳೂರು.
2. ನಿರ್ದೇಶಕರು, ಕೃಷಿ ಇಲಾಖೆ, ಬೆಂಗಳೂರು.
3. ನಿರ್ದೇಶಕರು, ತೋಟಗಾರಿಕೆ ಇಲಾಖೆ, ಲಾಲ್‌ಬಾಗ್, ಬೆಂಗಳೂರು.
4. ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ಬೆಂಗಳೂರು.
5. ನಿರ್ದೇಶಕರು, ಮೀನುಗಾರಿಕೆ ನಿರ್ದೇಶನಾಲಯ (ಒಳನಾಡು) ಪೋಡಿಯಂ ಬ್ಲಾಕ್, 3ನೇ ಮಹಡಿ ವಿ.ವಿ. ಗೋಪುರ ಬೆಂಗಳೂರು.
6. ಮುಖ್ಯ ಕಾರ್ಯಚರಣೆ ಅಧಿಕಾರಿಗಳು, ಎಂಜಿಎನ್‌ಆರ್‌ಇಜಿಎ, ಬೆಂಗಳೂರು.
7. ಅಪರ ಅಭಿಯಾನ ನಿರ್ದೇಶಕರು, ಡೇ–ಎನ್‌ಆರ್‌ಎಲ್‌ಎಂ, ಬೆಂಗಳೂರು.
8. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್‌ಗಳು.
9. ಕಛೇರಿ ಪ್ರತಿ / ರಕ್ಷಾ ಕಡತಕ್ಕೆ

**ಪ್ರತಿಯನ್ನು ಮಾಹಿತಿಗಾಗಿ, ಗೌರವ ಪೂರ್ವಕವಾಗಿ ಸಲ್ಲಿಸಿದೆ.**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಹಾಗೂ ಅಭಿವೃದ್ಧಿ ಆಯುಕ್ತರು ಇವರ ಆಪ್ತ ಶಾಖೆ,
2. ಅಪರ ಮುಖ್ಯ ಕಾರ್ಯದರ್ಶಿರವರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ಇವರ ಆಪ್ತ ಶಾಖೆ
3. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, (ಪಂಚಾಯತ್ ರಾಜ್) ಬೆಂಗಳೂರು ಇವರ ಆಪ್ತ ಶಾಖೆಗೆ
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕೃಷಿ ತೋಟಗಾರಿಕೆ ಮತ್ತು ರೇಷ್ಮೆ ಇಲಾಖೆ, ಇವರ ಆಪ್ತ ಶಾಖೆ.
5. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಇವರ ಆಪ್ತ ಶಾಖೆ.
6. ಕಾರ್ಯದರ್ಶಿ, ಪಶು ಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ, ಇವರ ಆಪ್ತ ಶಾಖೆ.
7. ಉಪ ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು ಇವರ ಆಪ್ತ ಶಾಖೆಗೆ.
8. ಉಪ ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ಧಾರವಾಡ ರವರ ಆಪ್ತ ಶಾಖೆಗೆ.
9. ಉಪ ಕುಲಪತಿಗಳು, ಕೃಷಿ ವಿಶ್ವವಿದ್ಯಾನಿಲಯ, ರಾಯಚೂರು ಇವರ ಆಪ್ತ ಶಾಖೆಗೆ
10. ಉಪ ಕುಲಪತಿಗಳು, ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಬಾಗಲಕೋಟೆ ಇವರ ಆಪ್ತ ಶಾಖೆಗೆ
11. ಉಪ ಕುಲಪತಿಗಳು ಕರ್ನಾಟಕ ಪಶುಪಾಲನೆ, ಪ್ರಾಣಿ ಮತ್ತು ಪಶುವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾನಿಲಯ ಬೀದರ್ ರವರ ಆಪ್ತ ಶಾಖೆಗೆ
12. ಉಪ ಕುಲಪತಿಗಳು, ಕೆಳದಿ ಶಿವಪ್ಪ ನಾಯಕ್ ಕೃಷಿ ಮತ್ತು ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ, ಶಿವಮೊಗ್ಗ ಇವರ ಆಪ್ತ ಶಾಖೆಗೆ.
13. ಆಯುಕ್ತರು, ಕೃಷಿ ಇಲಾಖೆ, ಶೇಷಾದ್ರಿ ರಸ್ತೆ, ಬೆಂಗಳೂರು ಇವರ ಆಪ್ತ ಶಾಖೆ.
14. ಆಯುಕ್ತರು, ಎಂಜಿಎನ್‌ಆರ್‌ಇಜಿಎ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು ರವರ ಆಪ್ತ ಶಾಖೆಗೆ.

## ಅನುಬಂಧ-1

### ಡೇ-ಎನ್‌ಆರ್‌ಎಲ್‌ಎಂಯೋಜನೆಯಡಿ ಅನುಷ್ಠಾನಗೊಳಿಸುತ್ತಿರುವ ಕಾರ್ಯಕ್ರಮ/ಚಟುವಟಿಕೆಗಳ ವಿವರ:

1. ಮಹಿಳಾ ಸ್ವಸಹಾಯ ಗುಂಪುಗಳ ರಚನೆ, ವಾರ್ಡ್ ಮಟ್ಟದ ಒಕ್ಕೂಟಗಳ ರಚನೆ ಮತ್ತು ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ರಚನೆ ಮತ್ತು ಸುಸ್ಥಿರತೆಗೆ ಬೆಂಬಲ.
2. ಎಲ್ಲಾ ಹಂತಗಳ ಸಮುದಾಯ ಆಧಾರಿತ ಸಂಸ್ಥೆಗಳ ಸದಸ್ಯರುಗಳು, ಉಪಸಮಿತಿಗಳು ಹಾಗೂ ಕಾರ್ಯಕಾರಿ ಸಮಿತಿ ಸದಸ್ಯರುಗಳಿಗೆ ವಿವಿಧ ಬಗೆಯ ತರಬೇತಿಗಳನ್ನು ನೀಡಲಾಗುತ್ತಿದೆ.
3. ಕೃಷಿಸಖಿ, ಪಶುಸಖಿ, ವನಸಖಿ, ಮತ್ಸ್ಯಸಖಿ, ಬ್ಯಾಂಕ್ ಸಖಿ, ವಿಮಾ ಸಖಿ ಹಾಗೂ ಇನ್ನಿತರೆ ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಮತ್ತು ತರಬೇತಿಗೆ ಬೆಂಬಲ.
4. ರಾಜ್ಯ ಮತ್ತು ತಾಲ್ಲೂಕು ಮಟ್ಟದ ವಿವಿಧ ಬಗೆಯ ವೃತ್ತಿಪರ ಸಂಪನ್ಮೂಲ ವ್ಯಕ್ತಿಗಳ ಆಯ್ಕೆ ಮತ್ತು ತರಬೇತಿ ನೀಡಲಾಗುತ್ತಿದೆ.
5. ಸಣ್ಣ ಮತ್ತು ಅತೀ ಸಣ್ಣ ರೈತ ಮಹಿಳೆಯರ ತಾಂತ್ರಿಕ ಜ್ಞಾನ ಹೆಚ್ಚಿಸಿ ಅಧಿಕ ಲಾಭ ಗಳಿಸುವ ಉದ್ದೇಶದಿಂದ ಸುಸ್ಥಿರ ಕೃಷಿ ಪದ್ಧತಿ ಕುರಿತಂತೆ ಸಾಮರ್ಥ್ಯ ಅಭಿವೃದ್ಧಿ ಮತ್ತು ಬೆಂಬಲ.
6. ಗ್ರಾಮ ಮಟ್ಟದಲ್ಲಿ ನಿರಂತರ ರೈತರ ಕ್ಷೇತ್ರ ಪಾಠ ಶಾಲೆ ಆಯೋಜನೆ.
7. ಸಾವಯುವ ಕೃಷಿ ಪದ್ದತಿ ಅಳವಡಿಸಲು ಸಾವಯುವ ಗ್ರಾಮ ಗುಚ್ಛಗಳ ಅಭಿವೃದ್ಧಿ.
8. ಸಮಗ್ರ ಕೃಷಿ ಪದ್ಧತಿ ಅಳವಡಿಸಲು ಸಮಗ್ರ ಕೃಷಿ ಗುಚ್ಛಗಳ ಅಭಿವೃದ್ಧಿ.
9. ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲು ರೈತ ಮಹಿಳಾ ಉತ್ಪಾದಕರ ಗುಂಪುಗಳ ರಚನೆ ಮತ್ತು ರೈತ ಮಹಿಳಾ ಉತ್ಪಾದಕರ ಕಂಪನಿ/ಸಂಸ್ಥೆಗಳ ಸ್ಥಾಪನೆ ಹಾಗೂ ಬೆಂಬಲ.
10. ಕೃಷಿಯೇತರ ಚಟುವಟಿಕೆಗಳನ್ನು ಬೆಂಬಲಿಸಲು ವಿವಿಧ ಬಗೆಯ ಉದ್ದಿಮೆಗಳ ಗುಚ್ಛಗಳ ಸ್ಥಾಪನೆ ಮತ್ತು ಮಾರುಕಟ್ಟೆ ಬೆಂಬಲ ಕಲ್ಪಿಸುವುದು.
11. ಒಕ್ಕೂಟಗಳ ಸದಸ್ಯರುಗಳಿಗೆ ವಿವಿಧ ಬಗೆಯ ಜೀವನೋಪಾಯ ಚಟುವಟಿಕೆಗಳನ್ನು ಕೈಗೊಳ್ಳಲು ಬ್ಯಾಂಕ್ ಮೂಲಕ ಸಾಲ-ಸೌಲಭ್ಯ ಒದಗಿಸಲು ಅಗತ್ಯ ಬೆಂಬಲ ನೀಡುವುದು.
12. ಒಕ್ಕೂಟಗಳ ಸದಸ್ಯರುಗಳು ಉತ್ಪಾದಿಸುವ ಉತ್ಪನ್ನಗಳಿಗೆ ಅಗತ್ಯ ಮಾರುಕಟ್ಟೆ ಸೌಲಭ್ಯ ಕಲ್ಪಿಸಲು ವಿವಿಧ ಮೇಳಗಳನ್ನು ಆಯೋಜಿಸುವುದು ಮತ್ತು ವಿವಿಧ ರಾಜ್ಯಗಳಲ್ಲಿ ಜರುಗುವ ಮೇಳಗಳಿಗೆ ಅರ್ಹ ಸದಸ್ಯರುಗಳನ್ನು ನಿಯೋಜನೆ ಮಾಡಲಾಗುತ್ತಿದೆ.
13. ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾ ಮಂಡಳಿ ನಿಯಮಿತ (ಕೆಎಂಎಫ್) ಸಹಯೋಗದೊಂದಿಗೆ **"ಕ್ಷೀರ ಸಂಜೀವಿನಿ"**-ಹೈನುಗಾರಿಕೆ ಮೂಲಕ ಗ್ರಾಮೀಣ ಮಹಿಳೆಯರ ಸಾಮಾಜಿಕ-ಆರ್ಥಿಕ ಅಭಿವೃದ್ಧಿ **ಯೋಜನೆ"** ಅನುಷ್ಠಾನಕ್ಕೆ ಬೆಂಬಲ.
14. ಕೇಂದ್ರ ಬುಡಕಟ್ಟು ವ್ಯವಹಾರಗಳ ಮಂತ್ರಾಲಯ ಮತ್ತು ರಾಜ್ಯ ಪರಿಶಿಷ್ಟ ಪಂಗಡಗಳ ಕಲ್ಯಾಣ ಇಲಾಖೆಗಳ ಸಹಯೋಗದೊಂದಿಗೆ **"ಪ್ರಧಾನಮಂತ್ರಿ- ವನಧನ ವಿಕಾಸ ಯೋಜನೆ"** ಅನುಷ್ಠಾನಕ್ಕೆ ಅಗತ್ಯ ಬೆಂಬಲ ವಿಸ್ತರಿಸಲಾಗಿದೆ.
15. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ (ಎಂಜಿಎನ್‌ಆಇಜಿಎಂ) ಸಹಭಾಗಿತ್ವದಲ್ಲಿ ಸದಸ್ಯರುಗಳ ವೈಯಕ್ತಿಕ ಆಸ್ತಿ ಸೃಜನೆಗೆ ಅಗತ್ಯ ಬೆಂಬಲ ನೀಡಲಾಗುತ್ತಿದೆ.
16. ಗ್ರಾಮೀಣ ಪ್ರದೇಶದ ಬಡ ಮತ್ತು ಕಡುಬಡ ಕುಟುಂಬಗಳ ಯುವಜನರಿಗೆ ವಿವಿಧ ವಿಷಯಗಳಲ್ಲಿ /ಕ್ಷೇತ್ರಗಳಲ್ಲಿ ತರಬೇತಿ ನೀಡಿ, ವೇತನ ಉದ್ಯೋಗ ಒದಗಿಸಲು **"ದೀನ-ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ"** (ಡಿಡಿಯು-ಜಿಕೆವೈ) ಅನುಷ್ಠಾನ ಮಾಡಲಾಗುತ್ತಿದೆ.
17. ಗ್ರಾಮೀಣ ಪ್ರದೇಶದ ಬಡ ಮತ್ತು ಕಡು ಬಡ ಕುಟುಂಬಗಳ ಯುವಜನರಿಗೆ ಆರ್‌ಸೆಟಿ ಮತು ರೂಡ್‌ಸೆಟಿಗಳ ಮುಖಾಂತರ ತರಬೇತಿ ನೀಡಿ ಬ್ಯಾಂಕ್ ಸಂಪರ್ಕ ಕಲ್ಪಿಸಿ ಸ್ವಉದ್ಯೋಗ ಕೈಗೊಳ್ಳಲು ಅಗತ್ಯ ಬೆಂಬಲದ ವಿಸ್ತರಣೆ.
18. ಕೇಂದ್ರದ ಆಹಾರ ಸಂಸ್ಕರಣಾ ಉದ್ದಿಮೆಗಳ ಮಂತ್ರಾಲಯ ಮತ್ತು ಕರ್ನಾಟಕ ರಾಜ್ಯ ಕೃಷಿ ಉತ್ಪನ್ನಗಳ ಸಂಸ್ಕರಣೆ ಹಾಗೂ ರಫ್ತು ನಿಗಮ ನಿಯಮಿತ (KAPPEC) ಸಹಯೋಗದೊಂದಿಗೆ **"ಪ್ರಧಾನ ಮಂತ್ರಿ-ಕಿರು ಆಹಾರ ಸಂಸ್ಕರಣಾ ಉದ್ದಿಮೆಗಳನ್ನು ನಿಯಮ ಬದ್ಧಗೊಳಿಸುವಿಕೆ ಯೋಜನೆ"** (PM-FME)ಯ ಬೀಜ ಧನ ಒದಗಿಸುವ ಕಾರ್ಯಕ್ರಮವನ್ನು ಡೇ-ಎನ್‌ಆರ್‌ಎಲ್‌ಎಂ ಮೂಲಕ ಅನುಷ್ಠಾನ ಮಾಡುತ್ತಿದ್ದು, ಪರಿಶಿಷ್ಠ ಪಂಗಡದ ಫಲಾನುಭವಿಗಳಿಗೆ ಅನುಕೂಲ ಕಲ್ಪಿಸಲಾಗುತ್ತಿದೆ.

19. ರಾಜ್ಯದ ವಿವಿಧ ಜಿಲ್ಲೆಗಳ ಗುಡ್ಡಗಾಡು ಪ್ರದೇಶ ಮತ್ತು ಅಗತ್ಯ ಸಾರಿಗೆ ವ್ಯವಸ್ಥೆಯಿಂದ ವಂಚಿತವಾಗಿರುವ ದೂರದ ಹಳ್ಳಿಗಳ ಜನರ ಸಾರಿಗೆ ವ್ಯವಸ್ಥೆ ಮತ್ತು ವಿವಿಧ ಉತ್ಪನ್ನಗಳ ಸಾಗಾಣಿಕೆಗೆ ಬೆಂಬಲ ನೀಡಲು **"ಅಜೀವಿಕಾ ಗ್ರಾಮೀಣ ಎಕ್ಸ್‌ಪ್ರೆಸ್ ಯೋಜನೆ (AGEY)"** ಮೂಲಕ ಲಘು ವಾಹನಗಳ ಖರೀದಿಗೆ ಅನುದಾನ ಒದಗಿಸಲಾಗುತ್ತಿದೆ.
20. ಗ್ರಾಮ ಪಂಚಾಯತ್ ಮತ್ತು ಗ್ರಾಮ ಪಂಚಾಯತ್ ಮಟ್ಟದ ಮಹಿಳಾ ಒಕ್ಕೂಟಗಳ ಸಹಭಾಗಿತ್ವದಲ್ಲಿ ಘನ ತ್ಯಾಜ್ಯ ನಿರ್ವಹಣಾ ಘಟಕಗಳ ಸ್ಥಾಪನೆ ಮತ್ತು ನಿರ್ವಹಣೆಗೆ ಅಗತ್ಯ ಬೆಂಬಲದ ವಿಸ್ತರಣೆ.
21. ಕೇಂದ್ರ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಸಹಯೋಗದೊಂದಿಗೆ **"ಪೋಷಣ್ ಅಭಿಯಾನ"** ಯೋಜನೆ ಅನುಷ್ಠಾನದಡಿ ಅರಿವು/ಜಾಗೃತಿ ಕಾರ್ಯಕ್ರಮಗಳನ್ನು ಡೇ-ಎನ್‌ಆರ್‌ಎಲ್‌ಎಂ ವತಿಯಿಂದ ಹಮ್ಮಿಕೊಳ್ಳಲಾಗುತ್ತಿದೆ.
22. ಇತರೆ ಸಹ ಇಲಾಖೆಗಳಡಿ ಅನುಷ್ಠಾನ ಮಾಡಲಾಗುತ್ತಿರುವ ವಿವಿಧ ಕಾರ್ಯಕ್ರಮಗಳನ್ನು ಸಹ ಡೇ-ಎನ್‌ಆರ್‌ಎಲ್‌ಎಂ ಯೋಜನೆಯೊಂದಿಗೆ ಒಗ್ಗೂಡಿಸಿ ಅನುಷ್ಠಾನ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗುತ್ತಿದೆ.

## ಅನುಬಂಧ-2

'ಜೀವನೋಪಾಯ ವರ್ಷ' ಆಚರಣೆಯ ಭಾಗವಾಗಿ **ಕೃಷಿ ಜೀವನೋಪಾಯ ವಿಭಾಗದಡಿ** ಹಮ್ಮಿಕೊಳ್ಳಲು ಉದ್ದೇಶಿಸಲಾಗಿರುವ ಕಾರ್ಯಕ್ರಮಗಳ / ಚಟುವಟಿಕೆಗಳ ಪರಿಣಾಮಕಾರಿ ಅನುಷ್ಠಾನಕ್ಕಾಗಿ ಕೆಳಕಂಡ ಕಾರ್ಯತಂತ್ರಗಳನ್ನು ಅಳವಡಿಸಿಕೊಳ್ಳಲಾಗುವುದು.

- ಕೃಷಿ ಜೀವನೋಪಾಯ ಸಮುದಾಯ ಸಂಪನ್ಮೂಲಗಳ ವ್ಯಕ್ತಿಗಳ ಪೈಕಿ **5962** ಕೃಷಿ ಸಖಿ ಮತ್ತು **5962** ಪಶು ಸಖಿಯರುಗಳ ಆಯ್ಕೆ ಮಾಡಿ ಕೃಷಿ ವಿಜ್ಞಾನ ಕೇಂದ್ರಗಳು, ಪಶು ಸಂಗೋಪನೆ ಇಲಾಖೆಯ ತರಬೇತಿ ಕೇಂದ್ರಗಳು ಹಾಗೂ ಆರ್‌ಸೆಟಿಗಳ ಮೂಲಕ ವಿವಿಧ ಹಂತಗಳಲ್ಲಿ ತರಬೇತಿ ನೀಡಲಾಗುವುದು. ಈ ರೀತಿ ತರಬೇತಿ ಪಡೆದ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಮೂಲಕ ಆದ್ಯತಾ ಮಹಿಳಾ ರೈತರಿಗೆ ಕೃಷಿ, ತೋಟಗಾರಿಕೆ, ರೇಷ್ಮೆ, ಪಶು ಸಂಗೋಪನೆ ಹಾಗೂ ಕೃಷಿ ಪೌಷ್ಠಿಕ ತೋಟಗಳ ಅಭಿವೃದ್ಧಿ ಕುರಿತಂತೆ ವಿಸ್ತರಣಾ ಸೇವೆಗಳನ್ನು ಒದಗಿಸಿಕೊಡಲಾಗುವುದು.
- ಸಾವಯವ ಕೃಷಿ ಪದ್ಧತಿಯನ್ನು ಉತ್ತೇಜಿಸಲು ಪ್ರಾಯೋಗಿಕವಾಗಿ 03 ಎನ್‌ಆರ್‌ಇಟಿಪಿ ಜಿಲ್ಲೆಗಳ 15 ತಾಲ್ಲೂಕುಗಳಲ್ಲಿ ತಲಾ 02 ರಂತೆ ಒಟ್ಟು 30 ಸಾವಯವ ಗ್ರಾಮ ಸಮೂಹಗಳ ಮೂಲಕ 4500 ಸಣ್ಣ ಮತ್ತು ಅತೀ ಸಣ್ಣ ಮಹಿಳಾ ರೈತರನ್ನು ಆವರಿಸಲಾಗುವುದು. ಪ್ರಸಕ್ತ ಸಾಲಿನಿಂದ ಪ್ರಾರಂಭಿಸಿ 2024-2025ನೇ ಸಾಲಿನ ಅಂತ್ಯಕ್ಕೆ ಪಿಜಿಎಸ್ ಪೋರ್ಟಲ್ ಮೂಲಕ ದೃಢೀಕರಣ ಪ್ರಮಾಣ ಪತ್ರ ದೊರಕಿಸಿಕೊಡಲಾಗುವುದು.
- ಸಣ್ಣ ಮತ್ತು ಅತೀ ಸಣ್ಣ ಮಹಿಳಾ ರೈತ ಕುಟುಂಬದ ಆದಾಯದಲ್ಲಿ ದ್ವಿಗುಣವಾಗುವಂತೆ ಮಾಡುವ ಉದ್ದೇಶದಿಂದ ಕೃಷಿ ಮತ್ತು ಕೃಷಿಗೆ ಸಂಬಂಧಿಸಿದ ಎಲ್ಲಾ ರೀತಿಯ ಚಟುವಟಿಕೆಗಳನ್ನು ಅಳವಡಿಸಿಕೊಳ್ಳುವಂತೆ ಉತ್ತೇಜಿಸಲು 03 ಎನ್‌ಆರ್‌ಇಟಿಪಿ ಜಿಲ್ಲೆಗಳ ಆಯ್ದ 5 ತಾಲ್ಲೂಕುಗಳಲ್ಲಿ 14 ಸಮಗ್ರ ಕೃಷಿ ಸಮೂಹಗಳ ಅಭಿವೃದ್ಧಿ ಮಾಡುವ ಮೂಲಕ **3500** ಕುಟುಂಬಗಳನ್ನು ಆವರಿಸುವ ಗುರಿ ಹೊಂದಲಾಗಿದೆ. ಸರ್ಕಾರದ ವಿವಿಧ ಸಹ ಇಲಾಖೆಗಳಲ್ಲಿ ದೊರಕಿಸಿರುವ ಎಲ್ಲಾ ಬಗೆಯ ಸೌಲಭ್ಯಗಳನ್ನು ಒದಗಿಸಿಕೊಡಲು ಒಗ್ಗೂಡಿಸುವಿಕೆ ಕಾರ್ಯತಂತ್ರ ಅಳವಡಿಸಿಕೊಂಡು ಕನಿಷ್ಠ 02 ವರ್ಷಗಳ ಕಾಲ ಬೆಂಬಲ ನೀಡುವ ಉದ್ದೇಶ ಹೊಂದಲಾಗಿದೆ.
- ಬಡ ಮತ್ತು ಕಡು ಬಡ ಕುಟುಂಬಗಳ ಸದಸ್ಯರುಗಳ ಅಪೌಷ್ಠಿಕತೆ ದೂರ ಮಾಡಿ, ಆರೋಗ್ಯವಂತ ಸಮಾಜವನ್ನು ಕಟ್ಟುವ ಉದ್ದೇಶದಿಂದ ಪ್ರತಿಯೊಂದು ಕುಟುಂಬಕ್ಕೂ ವರ್ಷ ಪೂರ್ತಿ ಪೌಷ್ಠಿಕ ಆಹಾರ ಸಿಗುವಂತೆ ಮಾಡುವ ಉದ್ದೇಶದಿಂದ ರಾಜ್ಯದ ಪ್ರತಿ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳಲ್ಲಿ ತಲಾ 94 ರಂತೆ ಒಟ್ಟು **562300** ಕುಟುಂಬಗಳಲ್ಲಿ ಕೃಷಿ ಪೌಷ್ಠಿಕ ತೋಟ (Agri Nutri Garden) ಅಭಿವೃದ್ಧಿಪಡಿಸುವ ಗುರಿ ಹೊಂದಲಾಗಿದೆ. ಈ ಚಟುವಟಿಕೆಯನ್ನು ಎಂಜಿಎನ್‌ಆರ್‌ಇಜಿಎ, ತೋಟಗಾರಿಕೆ ಇಲಾಖೆ ಮತ್ತು ಡೇ-ಎನ್‌ಆರ್‌ಎಲ್‌ಎಂ ಸಹಯೋಗದೊಂದಿಗೆ ಅನುಷ್ಠಾನ ಮಾಡಲಾಗುವುದು.
- ಕೃಷಿ, ತೋಟಗಾರಿಕೆ, ರೇಷ್ಮೆ, ಪಶು ಸಂಗೋಪನೆ, ಮೀನುಗಾರಿಕೆ ಮತ್ತು ಅರಣ್ಯ ಇಲಾಖೆಗಳ ಕಾರ್ಯಕ್ರಮ/ಯೋಜನೆಗಳ ಮೂಲಕ ಸಿಗುವ ಸೌಲಭ್ಯ/ಸವಲತ್ತುಗಳನ್ನು ಡೇ-ಎನ್‌ಆರ್‌ಎಲ್‌ಎಂ ವಿಧೇಯಕ ಸ್ವಸಹಾಯ ಗುಂಪಿನ ಮಹಿಳೆಯರಿಗೆ ದೊರಕಿಸಿಕೊಡಲು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸಮನ್ವಯ ಸಮಿತಿ ಸಭೆ ನಡೆಸಿ ಅಗತ್ಯ ಕಾರ್ಯತಂತ್ರ ರೂಪಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು.

## ಅನುಬಂಧ-3

**ಮೌಲ್ಯ ಸರಪಳಿ ಅಭಿವೃದ್ಧಿ ಮತ್ತು ಮಾರುಕಟ್ಟೆ ಜೋಡಣೆ** ಅಡಿಯಲ್ಲಿ ಕೆಳಗಿನ ಚಟುವಟಿಕೆಗಳನ್ನು ಹಮ್ಮಿಕೊಳ್ಳಲು ಕಾರ್ಯತಂತ್ರ ರೂಪಿಸಲಾಗಿದೆ.

1. ರಾಜ್ಯದಲ್ಲಿ ಈಗಾಗಲೇ ರಚಿಸಲಾಗಿರುವ **4426** ಮಹಿಳಾ ರೈತ ಉತ್ಪಾದಕರ ಗುಂಪುಗಳು ಹಾಗೂ ಪ್ರಸಕ್ತ ಸಾಲಿನಲ್ಲಿ ರಚಿಸಲಿರುವ ಮಹಿಳಾ ರೈತ 6000 ಉತ್ಪಾದಕರ ಗುಂಪುಗಳಿಗೆ ವ್ಯವಹಾರ ಯೋಜನೆಗಳನ್ನು ತಯಾರಿಸಲಾಗುವುದು. ಪ್ರತಿಯೊಂದು ಉತ್ಪಾದಕರ ಗುಂಪುಗಳಿಗೂ ವ್ಯವಹಾರ ಯೋಜನೆ ಕುರಿತು ತರಬೇತಿಯನ್ನು ನೀಡಲಾಗುವುದು.
2. ರಚಿಸಲಾದ ಪ್ರತಿಯೊಂದು ಉತ್ಪಾದಕರ ಗುಂಪುಗಳಿಗೆ ತಲಾ ರೂ.1.5 ಲಕ್ಷಗಳ PG Start up ನಿಧಿಯನ್ನು ಬಿಡುಗಡೆಗೊಳಿಸಲಾಗುವುದು.
3. ನಂತರ PG ಗಳನ್ನು ಮಾರುಕಟ್ಟೆ ಜೋಡಣೆ ಮಾಡುವ (ವಿವಿಧ ಪ್ರಕಾರಗಳ ಕೊಳ್ಳುಗಾರರೊಂದಿಗೆ) ಕಾರ್ಯವನ್ನು ಅನುಷ್ಠಾನಗೊಳಿಸುವುದು.
4. ರಾಜ್ಯದ ಪ್ರತಿ ಜಿಲ್ಲೆಗಳಲ್ಲಿ ಒಂದರಂತೆ ಒಟ್ಟು 31 ಮಹಿಳಾ ರೈತ ಉತ್ಪಾದಕರ ಕಂಪನಿಗಳನ್ನು ರಚಿಸಲಾಗುವುದು.
5. ರಚಿಸಲಾಗಿರುವ 100 **ವನ್‌ಧನ್** ವಿಕಾಸ ಕೇಂದ್ರಗಳಲ್ಲಿ ಕಿರು ಅರಣ್ಯ ಉತ್ಪನ್ನಗಳನ್ನು ಅನಾವರಣಗೊಳಿಸಲಾಗುವುದು. (Product Launching)
6. ಪಿಎಂಎಫ್‌ಎಂಇ ಯೋಜನೆಯಡಿ 2022-23 ನೇ ಸಾಲಿಗೆ ಒಟ್ಟು 1 ಲಕ್ಷ ಮಹಿಳಾ ಕಿರು ಉದ್ಯಮಿಗಳಿಗೆ ರೂ.40,000/- ಮೂಲಧನವನ್ನು ನೀಡುವ ಗುರಿಯನ್ನು ಹೊಂದಲಾಗಿದೆ.
7. ಪ್ರತಿ ಗ್ರಾಮ ಪಂಚಾಯತ್‌ಗೆ ಒಬ್ಬರಂತೆ ರಾಜ್ಯದ 5963 ಗ್ರಾಮ ಪಂಚಾಯತ್‌ಗಳಿಗೆ ಕೃಷಿ ಉದ್ಯೋಗ ಸಖಿಯರ ನಿಯೋಜನೆ ಮಾಡಲಾಗುವುದು.

## ಅನುಬಂಧ-4
## ಕೃಷಿಯೇತರ ವಲಯದ ಚಟುವಟಿಕೆಗಳು

- ಜೀವನೋಪಾಯ ವರ್ಷ' ಅಭಿಯಾನದ ಭಾಗವಾಗಿ ರಾಜ್ಯದಾದ್ಯಂತ ಸ್ವಸಹಾಯ ಗುಂಪುಗಳಲ್ಲಿ ಉದ್ಯಮಶೀಲತೆಯ ಬಗ್ಗೆ ಅರಿವು ಮೂಡಿಸಲು ಮುದ್ರಣ ಮತ್ತು ದೃಶ್ಯಸಾಹಿತ್ಯಗಳು, ವೆಬಿನಾರ್‌ಗಳು, ಮತ್ತು ಸಾಮಾಜಿಕ ಮಾಧ್ಯಮ ಪ್ರಚಾರಗಳನ್ನು ಒಳಗೊಂಡ IEC ಅಭಿಯಾನವನ್ನು ಕೈಗೊಳ್ಳಲಾಗುವುದು. ಅದೇ ರೀತಿ ಎಲ್ಲಾ ಜಿಲ್ಲೆಗಳಲ್ಲಿ ಸಣ್ಣ ಉದ್ಯಮಗಳಿಗೆ ಶೃಂಗಸಭೆಗಳನ್ನು (ಸೆಮಿನಾರ್‌ಗಳು, ಕಾರ್ಯಾಗಾರಗಳು, ಅನುಭವ ಹಂಚಿಕೆ) ಆಯೋಜಿಸಲಾಗುವುದು ಹಾಗೂ ವಿವಿಧ ವಿಭಾಗಗಳಲ್ಲಿ ಯಶಸ್ವಿ ಉದ್ಯಮಿಗಳಿಗೆ ಪ್ರಶಸ್ತಿಗಳನ್ನು ನೀಡುವ ಮೂಲಕ ಉದ್ಯಮಿಗಳನ್ನು ಪ್ರೋತ್ಸಾಹಿಸಲಾಗುವುದು.

- ಪ್ರತಿಶತ 50 ಕ್ಕಿಂತ ಹೆಚ್ಚು CIF ಅನ್ನು SHG ಸದಸ್ಯರು ಸಣ್ಣ ಉದ್ಯಮಗಳ ಅಭಿವೃದ್ಧಿಗಾಗಿ ಬಳಸುವಂತೆ ಕ್ರಮವಹಿಸುವುದರ ಮೂಲಕ ಸಿಐಎಫ್ ಸರಿಯಾದ ಬಳಕೆಯನ್ನು ಮಾಡಲು ಕ್ರಮವಹಿಸಲಾಗವುದು. ಅದೇ ರೀತಿ ಕುಟುಂಬಗಳ ಜೀವನೋಪಾಯ ಯೋಜನೆ (FLP) ತಯಾರಿಸುವಂತೆ SHG ಕುಟುಂಬಗಳನ್ನು ಪ್ರೇರೇಪಿಸಲಾಗುವುದು. ಹೊಸ ಮತ್ತು ಅಸ್ತಿತ್ವದಲ್ಲಿರುವ ಉದ್ಯಮಿಗಳಿಗೆ ಉದ್ಯಮ ಅಭಿವೃದ್ಧಿ ಯೋಜನೆಗಳನ್ನು ಅಭಿವೃದ್ಧಿಪಡಿಸಿ ಹ್ಯಾಂಡ್ ಹೋಲ್ಡಿಂಗ್ ಬೆಂಬಲವನ್ನು CRP-EPಗಳ ಮೂಲಕ ಒದಗಿಸಲಾಗುತ್ತದೆ.

- ಸೂಕ್ಷ್ಮ ಉದ್ಯಮಗಳ ಡೇಟಾ ಸಂಗ್ರಹಣೆಗೆ ಪ್ರಾಮುಖ್ಯತೆ ನೀಡಲಾಗುವುದು. ಪ್ರತಿ GPLF ನಲ್ಲಿ SHG ಸದಸ್ಯರ ಎಲ್ಲಾ ಕೃಷಿಯೇತರ ಜೀವನೋಪಾಯಗಳನ್ನು ನೋಂದಾಯಿಸಲು GPL ಈ ಮಟ್ಟದಲ್ಲಿ ರಿಜಿಸ್ಟರ್ ಅನ್ನು ದಾಖಲಾತಿ ಪುಸ್ತಕವನ್ನು ನಿರ್ವಹಿಸಲಾಗುವುದು. NRLM ಎಂಟರ್‌ಪ್ರೈಸ್ ಮೊಡ್ಯೂಲ್‌ನಲ್ಲಿ ಮತ್ತು ಸಂತೆ ಕೌಶಲ್‌ಕರ್‌ನಲ್ಲಿ ಡೇಟಾ ಎಂಟ್ರಿಗಾಗಿ ವಿಶೇಷ ತರಬೇತಿಯನ್ನು ಆಯೋಜಿಸಲಾಗುವುದು.

- ಸಾಮರ್ಥ್ಯ ಅಭಿವೃದ್ಧಿ ಚಟುವಟಿಕೆಗಳು ಮತ್ತು ಕಾಯಕ್ರಮಗಳ ಮೂಲಕ ಜೀವನೋಪಾಯ ಉಪ ಸಮಿತಿಗಳನ್ನು ಬಲಪಡಿಸುವುದರ ಮೂಲಕ ಕೃಷಿಯೇತರ ಚಟುವಟಿಕೆಗಳನ್ನು ಅಭಿವೃದ್ಧಿಗೊಳಿಸಲಾಗುವುದು.

- ಕೌಶಲ್ಯ ತರಬೇತಿ ಅಗತ್ಯತೆಗಳನ್ನು ಗುರುತಿಸುವ ಭಾಗವಾಗಿ ರಾಜ್ಯ ಮತ್ತು ಜಿಲ್ಲಾಮಟ್ಟದಲ್ಲಿ SHG ಸದಸ್ಯರ ತರಬೇತಿ ಅಗತ್ಯಗಳ ಮೌಲ್ಯ ಮಾಪನವನ್ನು ನಡೆಸಲಾಗುತ್ತದೆ. ಸೂಕ್ತವಾದ ಕೌಶಲ್ಯ ತರಬೇತಿ ಕೋರ್ಸ್‌ಗಳನ್ನು ಗುರುತಿಸಿ ಮತ್ತು ತರಬೇತಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲು ಜಿಲ್ಲಾ ಮಟ್ಟದಲ್ಲಿ PIAಗಳನ್ನು ನೇಮಕ ಮಾಡಿಕೊಳ್ಳಲಾಗುವುದು.

- ಅಸ್ತಿತ್ವದಲ್ಲಿರುವ ಉದ್ಯಮಿಗಳ ಉತ್ಪಾದಕತೆ ಮತ್ತು ಲಾಭದಾಯಕತೆಯನ್ನು ಸುಧಾರಿಸಲು ಸಣ್ಣ ಉದ್ಯಮಗಳಿಗೆ ಕಾರ್ಯಕ್ಷಮತೆ ತರಬೇತಿ / ಉನ್ನತ-ಕೌಶಲ್ಯವನ್ನು ವಿವಿಧ ತಾಂತ್ರಿಕ ಪಾಲುದಾರರೊಂದಿಗೆ ಆಯೋಜಿಸಲಾಗುವುದು.

- ಈ ಕೆಳಕಂಡ ಜಿಲ್ಲೆಗಳಲ್ಲಿ ಸಣ್ಣ-ವಲಯಗಳನ್ನು ಅಬಿವೃದ್ಧಿ ಪಡಿಸಲಾಗುವುದು; ಚಿಕ್ಕಬಳ್ಳಾಪುರದಲ್ಲಿ ಚರ್ಮದ ಉತ್ಪನ್ನಗಳ ವಲಯ, ಧಾರವಾಡದಲ್ಲಿ ಕಸೂತಿ ವಲಯ, ಕೊಪ್ಪಳದಲ್ಲಿ ಕೌದಿ ಮತ್ತು ಕಿನ್ನಾಳ ಆಟಿಕೆಗಳ ವಲಯ, ಮೈಸೂರಿನಲ್ಲಿ ಅಗರಬತ್ತಿಗಳ ವಲಯ, ನವಲಗುಂದದಲ್ಲಿ ಕಾರ್ಪೆಟ್ ಮತ್ತು ಇಳಕಲ್- ಗುಳೇದಗುಡ್ಡ, ಬೆಳಗಾವಿ, ಶಹಾಪುರ, ಬೆಳಗಾವಿಯಲ್ಲಿ ಮತ್ತು ಮೊಳಕಾಲ್ಮೂರು ಸೀರೆ ವಲಯಗಳನ್ನು ಅಭಿವೃದ್ಧಿಪಡಿಸಲಾಗುವುದು (ಚನ್ನಪಟ್ಟಣ ಟಾಯ್ಸ್ ಮತ್ತು ಬಾಗಲಕೋಟೆ ಹಾಗೂ ವಿಜಯಪುರ ಜಿಲ್ಲೆಗಳಲ್ಲಿ ಜೂಟ್ ವಲಯ ಈಗಾಗಲೇ ಪ್ರಗತಿಯಲ್ಲಿದೆ).

- SHG ಉತ್ಪನ್ನಗಳ ವ್ಯಾಪಾರ ಮೇಳಗಳ ಭಾಗವಾಗಿ, ಹೋಬಳಿ ಮಟ್ಟದಲ್ಲಿ ಮಾಸಿಕ ಮಾರುಕಟ್ಟೆಗಳು, ಜಿಲ್ಲೆ, ವಿಭಾಗೀಯ ಮತ್ತು ರಾಜ್ಯ ಮಟ್ಟದಲ್ಲಿ ವಿಶೇಷ ಮೇಳಗಳು ಮತ್ತು ರಾಷ್ಟ್ರೀಯ SARAS ಮೇಳಗಳನ್ನು ಆಯೋಜಿಸಲಾಗುವುದು.

- ಸಾಂಪ್ರದಾಯಿಕ ಮಾರಾಟ ಕೇಂದ್ರಗಳಲ್ಲಿ ಸಂಜೀವಿನಿಯ ಸ್ವಂತ ಮಾರುಕಟ್ಟೆ ಸ್ಥಳ ಸ್ಥಾಪಿಸುವುದು, ಮಾರ್ಕೆಟಿಂಗ್ ಕಿಯೋಸ್ಕ್ ಮತ್ತು ಮಾರ್ಕೆಟಿಂಗ್ ಮಳಿಗೆಗಳನ್ನು ಸ್ಥಾಪಿಸಲಾಗುವುದು.

- ಆನ್‌ಲೈನ್ ಮಾರುಕಟ್ಟೆಯ ಉಪಕ್ರಮಗಳನ್ನು ಬಲಪಡಿಸಲಾಗುವುದು.

- ಯಶಸ್ಸು/ವಿಸ್ತರಣೆ/ಪರಿಪಕ್ವತೆಯ ಹಂತಗಳಲ್ಲಿ ಇರುವ ಸಂಜೀವಿನಿ-ಕೆಎಸ್‌ಆರ್‌ಎಲ್‌ಪಿಎಸ್ ಉದ್ಯಮಗಳ ಘಟಕಗಳು ತಮ್ಮ ಉತ್ಪನ್ನಗಳನ್ನು ವೃತ್ತಿಪರವಾಗಿ ಬ್ರ್ಯಾಂಡಿಂಗ್ ಮಾಡುವ ಮೂಲಕ ಮತ್ತು ಇತರ ಚಟುವಟಿಕೆಗಳ ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ ಹಾಗೂ ಮೌಲ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಮತ್ತು ಅವುಗಳನ್ನು ಸೂಕ್ತ ಮಾರುಕಟ್ಟೆಗಳಿಗೆ ಜೋಡಣೆ ಮಾಡಲಾಗುವುದು.

## ಅನುಬಂಧ-5
## ಹಣಕಾಸು ಸೇರ್ಪಡೆ

- ಹಣಕಾಸು ಸೇರ್ಪಡೆ ಯೋಜನೆಯಲ್ಲಿ ಎಲ್ಲಾ ಗ್ರಾಮೀಣ ಕುಟುಂಬಗಳಿಗೆ ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬ್ಯಾಂಕಿನ ವ್ಯವಸ್ಥೆ ಕಡ್ಡಾಯವಾಗಿ ಕಲ್ಪಿಸಬೇಕಾಗಿದೆ. ಅದರಂತೆ ಬ್ಯಾಂಕುಗಳು ತಮ್ಮ ಗ್ರಾಹಕರಿಗೆ/ಸ್ವ-ಸಹಾಯ ಗುಂಪಿನ ಸದಸ್ಯರುಗಳಿಗೆ ಉಳಿತಾಯ, ಹಣ ನಿರ್ವಹಣೆ, ಸಾಲ ಮತ್ತು ಇತರೆ ಸೌಲಭ್ಯಗಳನ್ನು ನೀಡುತ್ತದೆ. ಪ್ರತಿಯೊಬ್ಬರಿಗೂ ಆರ್ಥಿಕ ಸೌಲಭ್ಯಗಳನ್ನು ಪಡೆಯಲು ಅವಕಾಶ ಕಲ್ಪಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿರುತ್ತದೆ.
- ಸಂಜೀವಿನಿ-ಕೆ.ಎಸ್.ಆರ್.ಎಲ್.ಪಿ.ಎಸ್ ಸಂಸ್ಥೆಯಡಿ ಅನುಷ್ಠಾನಗೊಳಿಸಲಾಗುತ್ತಿರುವ ಕಾರ್ಯಕ್ರಮಗಳ ಪೈಕಿ ಸ್ವ-ಸಹಾಯ ಗುಂಪುಗಳ ಜೀವನೋಪಾಯ, ಸ್ವತ್ತುಗಳ ಸೃಷ್ಟಿ, ಆಹಾರ ಸುರಕ್ಷತೆ, ಸಾಲ ವಿನಿಮಯ, ಆರೋಗ್ಯ ನೈರ್ಮಲ್ಯವನ್ನು ಸುಧಾರಿಸಲು, ಸದರಿ ಗುಂಪುಗಳ ಸದಸ್ಯರ ದುರ್ಬಲತೆಯನ್ನು ಕಡಿಮೆ ಮಾಡಿ ಸ್ವ-ಸಹಾಯ ಗುಂಪುಗಳ ಜೀವನೋಪಾಯಕ್ಕಾಗಿ ಸಣ್ಣ ಬಂಡವಾಳವಾಗಿ ಸಂಸ್ಥೆಯ ವತಿಯಿಂದ ರಚನೆಗೊಂಡಂತಹ ಗ್ರಾಮ ಪಂಚಾಯಿತಿ ಮಟ್ಟದ ಒಕ್ಕೂಟಗಳ ಮೂಲಕ 2022-23ನೇ ಸಾಲಿನಲ್ಲಿ ಅರ್ಹ 30800 ಸ್ವ-ಸಹಾಯ ಗುಂಪುಗಳಿಗೆ ತಲಾ ರೂ.1.50 ಲಕ್ಷಗಳಂತೆ 462.00 ಕೋಟಿಗಳ ಸಮುದಾಯ ಬಂಡವಾಳ ನಿಧಿಯನ್ನು ಮೀಸಲಿಡಲಾಗಿರುತ್ತದೆ.
- 2022-23ನೇ ಸಾಲಿನಲ್ಲಿ 10000 ಸ್ವ-ಸಹಾಯ ಗುಂಪುಗಳಿಗೆ ತಲಾ ರೂ.15000/- ಗಳಂತೆ ಒಟ್ಟು ರೂ.15.00 ಕೋಟಿಗಳ ಸುತ್ತುನಿಧಿಯನ್ನು ನೀಡಲು ಯೋಜನೆ ರೂಪಿಸಲಾಗಿರುತ್ತದೆ. ಸುತ್ತುನಿಧಿ ಎಂಬುವುದು ಒಮ್ಮೆ ಮಾತ್ರ ಯೋಜನೆಯ ವತಿಯಿಂದ ಸ್ವ ಸಹಾಯ ಗುಂಪುಗಳಿಗೆ ನೀಡುವ ಅನುದಾನವಾಗಿದೆ. ಈ ಅನುದಾನದ ಮೊತ್ತವು ಸ್ವ ಸಹಾಯ ಗುಂಪಿನಲ್ಲಿ ಸದಸ್ಯರ ಉಳಿತಾಯದ ಹಣದೊಂದಿಗೆ ಸೇರಿ, ಒಟ್ಟು ಬಂಡವಾಳನ್ನು ಹೆಚ್ಚಿಸುವುದು ಮತ್ತು ಸ್ವ ಸಹಾಯ ಗುಂಪುಗಳು ಹೆಚ್ಚಿನ ಪ್ರಮಾಣದಲ್ಲಿ ಬ್ಯಾಂಕ್‌ಗಳಿಂದ ಸಾಲ ಪಡೆಯಲು ಅನುಕೂಲವಾಗಿದೆ. ಅಲ್ಲದೇ ಸ್ವ ಸಹಾಯ ಗುಂಪಿನ ಸದಸ್ಯರ ಸಾಲ ಮರುಪಾವತಿ ಶಿಸ್ತನ್ನು ರೂಪಿಸಿ, ಬ್ಯಾಂಕ್‌ಗಳಿಂದ ಹೆಚ್ಚಿನ ಪ್ರಮಾಣದಲ್ಲಿ ಸಾಲ ಪಡೆಯಲು ಸಹಕಾರಿಯಾಗಿದೆ.
- ಬ್ಯಾಂಕ್‌ಗಳು ಬಡಜನರಿಗೆ ಹೆಚ್ಚಿನ ಪ್ರಮಾಣದಲ್ಲಿ ಹಣಕಾಸು ನೆರವನ್ನು ನೀಡಲು ಶ್ರಮಿಸುತ್ತಿದ್ದರೂ ಸಹ, ಬ್ಯಾಂಕ್‌ಗಳ ಮೂಲಕ ಗ್ರಾಮೀಣ ಭಾಗದ ಎಲ್ಲಾ ವರ್ಗದ ಬಡಜನರನ್ನು ತಲುಪುವುದು ಕಷ್ಟವಾಗಿರುತ್ತದೆ. ಇದರಿಂದಾಗಿ ಗ್ರಾಮಾಂತರ ಪ್ರದೇಶದ ಅರ್ಹ ಜನತೆಗೆ ಹಣಕಾಸು ಸೌಲಭ್ಯ ಪೂರ್ಣ ಪ್ರಮಾಣದಲ್ಲಿ ಲಭ್ಯವಾಗುತ್ತಿಲ್ಲ. ಬ್ಯಾಂಕ್‌ನಂತಹ ಹಣಕಾಸು ಸಂಸ್ಥೆಗಳು ಅತ್ಯಂತ ಹಿಂದುಳಿದ ಸೌಲಭ್ಯ ರಹಿತ ಗ್ರಾಮಗಳನ್ನು ತಲುಪಲು ದುಸ್ತರವಾಗಿದೆ.
- ಈ ಕಾರಣದಿಂದಾಗಿ ಹಣಕಾಸು ಸೇವೆಯನ್ನು ಬಡಜನರಿಗೆ ಒದಗಿಸಲು ಮತ್ತು ಅವರನ್ನು ಬಡತನದ ಪರಿಸ್ಥಿತಿಯಿಂದ ಹೊರತಂದು ಶಾಶ್ವತ ಅಭಿವೃದ್ಧಿ ಸಾಧಿಸುವ ಕಾರ್ಯದಲ್ಲಿ ಪ್ರವೃತ್ತವಾಗಿದೆ. ಸ್ವ ಸಹಾಯ ಗುಂಪುಗಳಿಗೆ ಬ್ಯಾಂಕ್ ಸಾಲ ಸೌಕರ್ಯ ಒದಗಿಸುವ ಕಾರ್ಯಕ್ರಮದ ಮುಖ್ಯ ಉದ್ದೇಶವು ಅದೇ ಆಗಿದ್ದು, 2022-23ನೇ ಸಾಲಿನಲ್ಲಿ 492100 ಸ್ವ ಸಹಾಯ ಗುಂಪುಗಳ ಸದಸ್ಯರಿಗೆ ರೂ. 16800.00 ಕೋಟಿ ಸಾಲ ಸೌಲಭ್ಯ ಒದಗಿಸಲು ತೀರ್ಮಾನಿಸಲಾಗಿರುತ್ತದೆ.
- ಸಣ್ಣ ಮತ್ತು ಮಧ್ಯಮ ವರ್ಗದ ಉದ್ದಿಮೆಗಳಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಸಬಲಗೊಳ್ಳುವ ಉದ್ದೇಶದಿಂದ 10,000 ಸ್ವ-ಸಹಾಯ ಗುಂಪುಗಳ ಸದಸ್ಯರುಗಳಿಗೆ ಮುದ್ರಾ ಯೋಜನೆಯಡಿ ಸಾಲ ಸೌಲಭ್ಯ ಒದಗಿಸಲು 2022-23ನೇ ಸಾಲಿನಲ್ಲಿ ಕ್ರಮ ಕೈಗೊಳ್ಳಲಾಗುತ್ತಿದೆ.
- **ಸಮುದಾಯ ಸಂಪನ್ಮೂಲ ವ್ಯಕ್ತಿಗಳು-ಹಣಕಾಸು ಸಾಕ್ಷರತೆ:** ಡೇ-ಎನ್.ಆರ್.ಎಲ್.ಎಂ ಯೋಜನೆಯಡಿ ಬರುವ ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳು ಹಣಕಾಸು ಸಾಕ್ಷರತೆ ತರಬೇತಿಯ ಕೊರತೆಯಿಂದಾಗಿ ಹಣಕಾಸಿನ ನಿರ್ಧಾರಗಳನ್ನು ತೆಗೆದುಕೊಳ್ಳಲು ಕಷ್ಟಕರವಾಗಿರುತ್ತದೆ. ಉತ್ತಮ ಹಣಕಾಸಿನ ಅಭ್ಯಾಸಗಳು ಮತ್ತು ಸೂಕ್ತ ನಿರ್ಧಾರಗಳು ಜೊತೆ-ಜೊತೆಗೆ ಸಾಗಬೇಕಾಗಿದ್ದು, ಈ ಜ್ಞಾನವನ್ನು ಪಡೆಯಲು ಹಣಕಾಸು ಸಾಕ್ಷರತೆಯ ಅವಶ್ಯಕತೆ ಬಹುಮುಖ್ಯವಾಗಿರುತ್ತದೆ.
- ಸ್ವ-ಸಹಾಯ ಗುಂಪಿನ ಸದಸ್ಯರುಗಳು ಉತ್ತಮ ಹಣಕಾಸಿನ ನಿರ್ಧಾರಗಳನ್ನು ತೆಗೆದುಕೊಳ್ಳಲು ಅನುಕೂಲವಾಗುವಂತೆ ಹಣಕಾಸು ಸಾಕ್ಷರತೆ ತರಬೇತಿಯು ಅತ್ಯವಶ್ಯಕವಾಗಿದ್ದು, ಈ ಸಂಬಂಧ 2022-23ನೇ ಸಾಲಿನಲ್ಲಿ 85 ಮಾಸ್ಟರ್ ಟ್ರೈನರ್‌ಗಳ ಮೂಲಕ 1232 ಮಹಿಳಾ ಸದಸ್ಯರನ್ನು ಸಮುದಾಯ ಸಂಪನ್ಮೂಲ ವ್ಯಕ್ತಿಗಳು - ಹಣಕಾಸು ಸಾಕ್ಷರತೆ ತರಬೇತಿ ನೀಡಿ ಇವರುಗಳ ಮೂಲಕ 108480 ಸ್ವಸಹಾಯ ಗುಂಪುಗಳಲ್ಲಿನ ಪ್ರತಿ 10 ಸದಸ್ಯರುಗಳಿಗೆ ಅಂದರೆ 1084800 ಮಹಿಳಾ ಸದಸ್ಯರುಗಳಿಗೆ ಹಣಕಾಸು ಸಾಕ್ಷರತೆ ತರಬೇತಿ ನೀಡಲು ಯೋಜನೆ ರೂಪಿಸಲಾಗಿದ್ದು ಈ ತರಬೇತಿ

ಮೂಲಕ ಬ್ಯಾಂಕ್ ಸಾಲ ಸಂಪರ್ಕ ಮತ್ತು ಸ್ವಂತ ಹಣದಂತಹ ಹಣಕಾಸು ನಿಧಿಗಳನ್ನು ಅತ್ಯುತ್ತಮ್ಮಾಗಿ ಬಳಸಿಕೊಳ್ಳುವುದು, ನಿಯಮಿತ ಕಾಲದಲ್ಲಿ ಬ್ಯಾಂಕ್ ಸಾಲ ಮರುಪಾವತಿಸುವುದು, ಧೀರ್ಘಾವಧಿ ಹಣಕಾಸು ಯೋಜನೆಗಳ ಬಗ್ಗೆ ತಿಳುವಳಿಕೆ ಮೂಡಿಸುವುದು ಮತ್ತು ಬಡ ಸಾರ್ವಜನಿಕರು ಜೀವನೋಪಾಯಕ್ಕಾಗಿ ಕೂಡಿಟ್ಟ ಉಳಿತಾಯದ ಹಣವನ್ನು ಋಣಾತ್ಮಕವಲ್ಲದ (Ponzi schemes) ಯೋಜನೆಗಳಲ್ಲಿ ಉಳಿತಾಯ ಹಣವನ್ನು ಠೇವಣಿ ಮಾಡಿ ಕಳೆದುಕೊಳ್ಳುತ್ತಿದ್ದು ಈ ರೀತಿಯ ನಕಲಿ ಯೋಜನೆಗಳ ಬಗ್ಗೆ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸ್ವ-ಸಹಾಯ ಗುಂಪಿನ ಸದಸ್ಯರುಗಳಿಗೆ ಹಣಕಾಸು ಸಾಕ್ಷರತೆ ತರಬೇತಿ ಸಹಕಾರವಾಗುತ್ತದೆ.

- ಮಿಷನ್ **ಒನ್ ಜಿಪಿ ಒನ್** ಬಿಸಿ ಕಾರ್ಯಕ್ರಮದಡಿ ಎನ್‌ಆರ್‌ಇಟಿಪಿ ಜಿಲ್ಲೆಗಳ 339 ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳ ಸ್ವಸಹಾಯ ಗುಂಪಿನ ಅರ್ಹ ಮಹಿಳಾ ಸದಸ್ಯರನ್ನು ನಿಯಮಾನುಸಾರ ಆಯ್ಕೆ ಮಾಡಿ 6 ದಿನಗಳ ತರಬೇತಿ ನಡೆಸಿ ಐಐಬಿಎಫ್ ಪ್ರಮಾಣೀಕರಿಸಿ ಸಿಎಸ್‌ಸಿ ಐಡಿಗಳನ್ನು ರಚಿಸಲಾಗಿದ್ದು, 339 ಬಿಸಿ ಸಖಿಗಳಿಗೆ ಸಂಬಂಧಪಟ್ಟ ಗ್ರಾಮ ಪಂಚಾಯತ್‌ಗಳಲ್ಲಿ ಸದರಿಯವರಿಗೆ ಪ್ರಸ್ತುತ ಡಿಜಿಪೇ ಪಾಯಿಂಟ್‌ಗಳ ದೈನಂದಿನ ಕಾರ್ಯಚಟುವಟಿಕೆಗಳನ್ನು ನಿರ್ವಹಿಸಲು ಸ್ಥಳಾವಕಾಶ ನೀಡಿ ಕಂಪ್ಯೂಟರ್ ಮತ್ತು ಪ್ರಿಂಟರ್‌ಗಳನ್ನು ಗ್ರಾಮೀಣಾಭಿವೃದ್ಧಿ ಮಾರ್ಗಸೂಚಿಗಳಂತೆ ನೀಡಲು ಯೋಜನೆ ರೂಪಿಸಲಾಗಿದೆ.
- **ಉದ್ಯಮ ಸಂವರ್ಧನೆ:** ಸಂಜೀವಿನಿ ಯೋಜನೆಯಡಿ ರಚಿಸಲಾಗಿರುವ ಸ್ವಸಹಾಯ ಗುಂಪುಗಳು ಹಾಗೂ ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳಲ್ಲಿ 2022-23ನೇ ಸಾಲಿನಲ್ಲಿ 9 ಜಿಲ್ಲೆಗಳಲ್ಲಿ ಉದ್ಯಮ ಸಂವರ್ಧನೆಯಡಿ ಕೃಷಿ ಮತ್ತು ಕೃಷಿಯೇತರ ಚಟುವಟಿಕೆ ನಡೆಸುತ್ತಿರುವ ಸ್ವಸಹಾಯ ಗುಂಪಿನ ಸದಸ್ಯರುಗಳಿಗೆ 270 ವಿತ್ತ ಸಖಿಗಳ ಮೂಲಕ 61591 ಸದಸ್ಯರಿಗೆ ಯೋಜನೆಯಡಿ ದೊರಕುವಂತಹ ಆತಂರಿಕ ಸಾಲ ಹಾಗೂ ಬಾಹ್ಯ ಸಾಲಗಳನ್ನು ಕಲ್ಪಿಸಿ ಈ ಉದ್ಯಮ ಸಂವರ್ಧನೆಯನ್ನು ಬಲಪಡಿಸಲಾಗುವುದು.

## ಅನುಬಂಧ-6

**ಡಿಡಿಯು-ಜಿಕೆವೈ - ದೀನ-ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ ಅನುಸರಿಸುವ ಕಾರ್ಯತಂತ್ರ :**

- ಡಿಡಿಯು-ಜಿಕೆವೈ - ದೀನ ದಯಾಳ್ ಉಪಾಧ್ಯಾಯ ಗ್ರಾಮೀಣ ಕೌಶಲ್ಯ ಯೋಜನೆ (ಆಜೀವಿಕ ಸ್ಕಿಲ್ಸ್ ಯೋಜನೆ ಹೆಸರಿನೊಂದಿಗೆ ಪ್ರಚಲಿತವಾಗಿರುವ) "ಗ್ರಾಮೀಣ ಬಡ ಯುವಕ/ಯುವತಿಯರನ್ನು ಆರ್ಥಿಕ ಸ್ವತಂತ್ರ್ಯರನ್ನಾಗಿ, ಜಾಗತಿಕ ಸಂಬಂಧ ಕಾರ್ಯ ಪಡೆ" ಯನ್ನಾಗಿ ಪರಿವರ್ತಿಸುವ ದೃಷ್ಟಿಯನ್ನು ಹೊಂದಿದೆ.
- ಡಿಡಿಯು-ಜಿಕೆವೈ ಅಂತರ್ಗತ ಕಾರ್ಯಸೂಚಿಯೊಂದಿಗೆ ಈ ದೃಷ್ಟಿಯನ್ನು ಸಾಧಿಸುವ ಗುರಿಯನ್ನು ಹೊಂದಿದೆ. ಉದ್ಯಮಗಳ ಅವಶ್ಯಕತೆಗಳನ್ನು ಕೇಂದ್ರೀಕರಿಸಿ ಮತ್ತು ಅದರ ಪ್ರಭಾವದೊಂದಿಗೆ ಗ್ರಾಮೀಣ ಬಡ ಯುವಕರಲ್ಲಿ ಕೌಶಲ್ಯ ಸಂಪಾದನೆಯನ್ನು ಮಾಡುವ ಮಹತ್ವಾಕಾಂಕ್ಷೆಯನ್ನು ಹೊಂದಿ ಆ ಮೂಲಕ ಸಶಕ್ತ ಮತ್ತು ಉತ್ಪಾದಕ ಕಾರ್ಯಪಡೆಯನ್ನು ರಚಿಸಲು ಸಹಾಯ ಮಾಡುವುದಾಗಿದೆ.
- ಡಿಡಿಯು-ಜಿಕೆವೈ ಕೌಶಲ್ಯಕ್ಕೆ ಸಂಬಂಧಿಸಿದಂತೆ ವಿಶಿಷ್ಟವಾದ, ಆದರದೇ ಆದ ಅನನ್ಯ ಗಮನ ಮತ್ತು ವಿಧಾನವನ್ನು ಹೊಂದಿದೆ. ದೇಶದ ಗ್ರಾಮಗಳಲ್ಲಿ ವಾಸಿಸುವ ಜನಸಂಖ್ಯಾ ಲಾಭಾಂಶದ ಬಹುಪಾಲು ದೇಶದ ಆರ್ಥಿಕ ಬೆಳವಣಿಗೆಯಲ್ಲಿ ಭಾಗವಹಿಸುವ ಕೌಶಲ್ಯಗಳನ್ನು ಹೊಂದಿದೆಯೇ ಎಂದು ಖಚಿತಪಡಿಸಿಕೊಳ್ಳಲು ಬಡ ಗ್ರಾಮೀಣ ಕುಟುಂಬಗಳ ಯುವಜನರನ್ನು ಸಂಪೂರ್ಣವಾಗಿ ಕೇಂದ್ರೀಕರಿಸಿದ ಏಕೈಕ ರಾಷ್ಟ್ರಮಟ್ಟದ ಕಾರ್ಯಕ್ರಮ ಇದಾಗಿದೆ. ವಿನ್ಯಾಸ ಮತ್ತು ಆದೇಶಗಳಲ್ಲಿ ಡಿಡಿಯುಜಿಕೆವೈ ಪ್ರಾಮುಖ್ಯತೆಯನ್ನು ಅನಾನುಕೂಲಕರ ಗುಂಪುಗಳೆಂದು ಗುರುತಿಸಲಾದ ಪಜಾ/ಪಪಂ/ಮಹಿಳೆ/ಅಲ್ಪಸಂಖ್ಯಾತರು ಮತ್ತು ವಿಶಿಷ್ಟ ಚೇತನರು, ಮಾನವ ಕಳ್ಳ ಸಾಗಾಣೆಯ ಸಂತ್ರಸ್ಥರು, ಪ್ರಮುಖವಾಗಿ ದುರ್ಬಲ ಬುಡಕಟ್ಟು ಗುಂಪುಗಳು ಮತ್ತು ಇತರೆ ದುರ್ಬಲ ಗುಂಪುಗಳಿಗೆ ನೀಡಲಾಗಿದೆ.
- ಡಿಡಿಯು-ಜಿಕೆವೈ ಯೋಜನೆಯು ರಾಷ್ಟ್ರದಲ್ಲಿ ಕೌಶಲ್ಯ ನೀಡಲು ಮೂಲಭೂತ ಸೌಕರ್ಯ ಮತ್ತು ಅದರ ಪ್ರಕ್ರಿಯೆಯಲ್ಲಿ ಗುಣಮಟ್ಟ ಮತ್ತು ಮಾನದಂಡಗಳನ್ನು ನಿಗದಿಪಡಿಸುವಲ್ಲಿ ಮುಂಚೂಣಿಯಲ್ಲಿದೆ. ಅದು ಗುಣಮಟ್ಟದ ಚೌಕಟ್ಟನ್ನು ಹೊಂದಿದ್ದು ಸ್ವಯಂ ನಿಯಂತ್ರಣವನ್ನು ತನ್ನ ಗುಣಮಟ್ಟ ನೀತಿಯ ಹೃದಯ ಭಾಗದಲ್ಲಿ ಹೊಂದಿದೆ. ಕೌಶಲ್ಯದ ಮಾನದಂಡವನ್ನು ಜಾಗತಿಕ ಮಟ್ಟದಲ್ಲಿರಿಸುವ ಉದ್ದೇಶವನ್ನು ಹೊಂದಿದೆ. ಡಿಡಿಯುಜಿಕೆವೈ ಯೋಜನೆಯು ಪ್ರತಿಯೊಬ್ಬ ಮೃದು ಕೌಶಲ್ಯ, ಆಂಗ್ಲ ಭಾಷೆ ಕಲಿಕೆಯೊಂದಿಗೆ, ಪ್ರಶಿಕ್ಷಣಾರ್ಥಿಗಳಿಗೆ ಮಾಹಿತಿ ತಂತ್ರಜ್ಞಾನ ಬೆಂಬಲಿತ ಟ್ಯಾಬ್ಲೆಟ್ ನೀಡುತ್ತಿರುವ ಮೊದಲ ಯೋಜನೆಯಾಗಿದೆ.

ಡಿಡಿಯುಜಿಕೆವೈ ಯೋಜನೆಯು ಮೂರು ಹಂತ ರಚನೆಗಳೊಂದಿಗೆ ಯೋಜನಾ ಅನುಷ್ಠಾನವಾಗುತ್ತಿರುತ್ತದೆ. ಮೊದಲ ಹಂತದಲ್ಲಿ ಕೇಂದ್ರ ಗ್ರಾಮೀಣಾಭಿವೃದ್ಧಿ ಮಂತ್ರಾಲಯ ನೀತಿ-ನಿಬಂಧನೆಗಳ ರಚನೆ, ಸೌಲಭ್ಯ ಮತ್ತು ಸಮನ್ವಯ ಸಂಸ್ಥೆಯಾಗಿ ರಾಷ್ಟ್ರ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತದೆ: ಎರಡನೇ ಹಂತವಾಗಿ ರಾಜ್ಯ ಕೌಶಲ್ಯ ಅಭಿಯಾನ / ರಾಜ್ಯ ಗ್ರಾಮೀಣ ಜೀವನೋಪಾಯ ಅಭಿಯಾನ (ಎಸ್‌ಆರ್‌ಎಲ್‌ಎಂ ಗಳು) ರಾಜ್ಯ ಅನುಷ್ಠಾನ ಸಹಕಾರ ನೋಡಲ್ ಸಂಸ್ಥೆಯಾಗಿ ಎರಡನೇ ಹಂತದಲ್ಲಿ ರಾಜ್ಯ ಮಟ್ಟದಲ್ಲಿ ಕಾರ್ಯ ನಿರ್ವಹಿಸುತ್ತಿರುತ್ತದೆ ಮತ್ತು ಬಾಹ್ಯ ಸಂಸ್ಥೆಗಳು (ಕಾರ್ಪೋರೇಟ್ ಸಂಸ್ಥೆಗಳು, ಸಂಘಗಳು, ಸ್ವಯಂ ಸೇವಾ ಸಂಸ್ಥೆಗಳು, ಖಾಸಗಿ ಕೌಶಲ್ಯ ತರಬೇತಿ ನೀಡುವವರು) ಯೋಜನಾ ಅನುಷ್ಠಾನ ಸಂಸ್ಥೆಗಳಾಗಿ (ಪಿಐಎ) ಮೂರನೇ ಹಂತದಲ್ಲಿ ತಳಮಟ್ಟದಲ್ಲಿ ಕೌಶಲ್ಯ ತರಬೇತಿ ಮತ್ತು ಉದ್ಯೋಗ ದೊರಕಿಸಿಕೊಡುವುದರ ಮೂಲಕ ಯೋಜನೆಯಲ್ಲಿ ತೊಡಗಿಸಿಕೊಂಡಿರುತ್ತಾರೆ.

- ಆಯ್ದ 18 ರಿಂದ 35 ವರ್ಷದ ಒಳಗಿನ ಗ್ರಾಮೀಣ ಬಡ ಯುವಜನತೆಗೆ ಆಪ್ತ ಸಮಾಲೋಚನೆಯ ಜೊತೆ ಅವರ ಕೌಶಲ್ಯವನ್ನು ಅಭಿವೃದ್ಧಿಗೊಳಿಸಿ, ಉದ್ಯೋಗ ದೊರಕಿಸಿಕೊಡಲು ಸಹಾಯ ಮಾಡುವುದರ ಮೂಲಕ ಸ್ವಾವಲಂಬಿ ಜೀವನ ಮಾಡಲು ಅನುಕೂಲ ಕಲ್ಪಿಸುವ ಉದ್ದೇಶ ಹೊಂದಲಾಗಿದೆ. ಈ ಯೋಜನೆಯ ಅಡಿಯಲ್ಲಿ ಆಯ್ಕೆಯಾಗಿರುವ ತಮಗೆಲ್ಲರಿಗೂ ಸಂಸ್ಥೆಯು ಈ ಮೂಲಕ ಶುಭಾಶಯಗಳನ್ನು ತಿಳಿಸುತ್ತಿದೆ. ನೀವೆಲ್ಲರೂ 3/6/9 ತಿಂಗಳುಗಳ ತರಬೇತಿ ಪಡೆಯಲಿದ್ದು, ತರಬೇತಿ ಪೂರ್ಣಗೊಂಡ ಕೂಡಲೇ ನಿಮಗೆ ಉದ್ಯೋಗ ದೊರಕಿಸಿಕೊಡಲು ಸಹಾಯ ಮಾಡಲಾಗುವುದು.
- ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ ಯುವತಿಯರಿಗೆ ತರಬೇತಿ ನೀಡಿ ಉದ್ಯೋಗ ಒದಗಿಸಲು 2022-23 ನೇ ಸಾಲಿನಲ್ಲಿ 4720 ಅಭ್ಯರ್ಥಿಗಳಿಗೆ ತರಬೇತಿ ಮತ್ತು 3304 ಅಭ್ಯರ್ಥಿಗಳಿಗೆ ಉದ್ಯೋಗ ದೊರಕಿಸಿಕೊಡುವ ಗುರಿಯನ್ನು ಹೊಂದಿದೆ.
- ಡಿಡಿಯುಜಿಕೆವೈ ಯೋಜನೆಯ ಅಡಿಯಲ್ಲಿ 25 ಉದ್ಯೋಗ ಮೇಳಗಳನ್ನು ಜಿಲ್ಲಾ ಮತ್ತು ತಾಲ್ಲೂಕು ಅಂತಗಳಲ್ಲಿ ಆಯೋಜಿಸಲು ಗುರಿಯನ್ನು ಹೊಂದಲಾಗಿದೆ.
- ತರಬೇತಿ ಸಂಸ್ಥೆಗಳ ಆಯ್ಕೆ ಮತ್ತು ಉದ್ಯೋಗ ಒದಗಿಸಲು ಬೇಕಾಗಿರುವ ಅವಶ್ಯ ಮೂಲ ಮಾಹಿತಿಯನ್ನು ಪಡೆಯಲು ಮತ್ತು ಯೋಜನಾ ಅನುಷ್ಠಾನದ ಸಮರ್ಥ ಕಾರ್ಯಚರಣೆಗೆ 1 ಸಿಎಕ್ಸ್‌ಓ ಸಭೆ ಮತ್ತು ಸ್ಕಿಲ್ ಗ್ಯಾಪ್ ಅನಾಲಿಸಿಸ್ ಕೈಗೊಳ್ಳುವ ಯೋಜನೆಯನ್ನು ಹೊಂದಿದೆ.
- ಡಿಡಿಯುಜಿಕೆವೈ ಯೋಜನೆಯ 2022-23 ನೇ ಸಾಲಿನಲ್ಲಿ ರೂ.86.44 ಕೋಟಿ ರೂಪಾಯಿಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ತರಬೇತಿ ಕೇಂದ್ರಗಳನ್ನು ಸ್ಥಾಪಿಸಿ ಗ್ರಾಮೀಣ ಭಾಗದ ಬಡತನ ರೇಖೆಗಿಂತ ಕೆಳಗಿರುವ ಅಭ್ಯರ್ಥಿಗಳಿಗೆ ತರಬೇತಿ ಮತ್ತು ಉದ್ಯೋಗ ದೊರಕಿಸಿಕೊಡುವ ಯೋಜನೆಯನ್ನು ಹೊಂದಿದೆ.

## ಅನುಬಂಧ–7

**1. ಒಗ್ಗೂಡಿಸುವಿಕೆಯಡಿ ಕೃಷಿ ಇಲಾಖೆ ಅನುಸರಿಸಬಹುದಾದ ಕಾರ್ಯತಂತ್ರ**

1.1 ಕಿರು ಕೃಷಿ ಯಂತ್ರೋಪಕರಣ ಬಾಡಿಗೆ ಸೇವಾ ಕೇಂದ್ರಗಳ ಸ್ಥಾಪನೆ ಮತ್ತು ಉಸ್ತುವಾರಿಯನ್ನು ಗ್ರಾಮ ಪಂಚಾಯತ್ ಮಟ್ಟದ ಒಕ್ಕೂಟಗಳಿಗೆ ಆದ್ಯತೆ ಮೇಲೆ ಪರಿಗಣಿಸುವುದು.

1.2 ಇಲಾಖೆಯಡಿ ಅನುಷ್ಠಾನಗೊಳಿಸುವ ವಿವಿಧ ಕಾರ್ಯಕ್ರಮಗಳ ವಿಸ್ತರಣಾ ಚಟುವಟಿಕೆಗಳಿಗೆ ಕೃಷಿ ಸಖಿ ಹಾಗೂ ಇನ್ನಿತರೆ ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು.

1.3 ಇಲಾಖಾ ವತಿಯಿಂದ ಹಮ್ಮಿಕೊಳ್ಳುವ ವಿವಿಧ ಬಗೆಯ ಪ್ರಾತ್ಯಕ್ಷಿಕೆಗಳನ್ನು ಜಿಪಿಎಲ್‌ಎಫ್‌ನ ಸಹಯೋಗದೊಂದಿಗೆ ಅನುಷ್ಠಾನಗೊಳಿಸುವುದು.

1.4 ವಿವಿಧ ಬಗೆಯ ತರಬೇತಿಗಳು, ಕಾರ್ಯಾಗಾರಗಳು ಮತ್ತು ಶೈಕ್ಷಣಿಕ ಪ್ರವಾಸಗಳನ್ನು ಆಯೋಜಿಸುವಾಗ ಜಿಪಿಎಲ್‌ಎಫ್‌ನ ಸದಸ್ಯರುಗಳಿಗೆ ಆದ್ಯತೆ ನೀಡುವುದು.

1.5 ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳಿಂದ ಅನುಕೂಲ ಪಡೆದ ಅರ್ಹ ಫಲಾನುಭವಿಗಳ ಮಾಹಿತಿಯನ್ನು ಜಿಲ್ಲಾ ಮತ್ತು ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕಗಳಿಗೆ ಆಗಿಂದ್ದಾಗ್ಗೆ ಒದಗಿಸುವುದು.

**2. ಒಗ್ಗೂಡಿಸುವಿಕೆಯಡಿ ತೋಟಗಾರಿಕೆ ಇಲಾಖೆ ಅನುಸರಿಸಬಹುದಾದ ಕಾರ್ಯತಂತ್ರ**

2.1 ಇಲಾಖೆಯಡಿ ಅನುಷ್ಠಾನಗೊಳಿಸುವ ವಿವಿಧ ಕಾರ್ಯಕ್ರಮಗಳ ವಿಸ್ತರಣಾ ಚಟುವಟಿಕೆಗಳಿಗೆ ಕೃಷಿ ಸಖಿ ಹಾಗೂ ಇನ್ನಿತರೆ ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು.

2.2 ಇಲಾಖಾ ವತಿಯಿಂದ ಹಮ್ಮಿಕೊಳ್ಳುವ ವಿವಿಧ ಬಗೆಯ ಪ್ರಾತ್ಯಕ್ಷಿಕೆಗಳನ್ನು ಜಿಪಿಎಲ್‌ಎಫ್‌ನ ಸಹಯೋಗದೊಂದಿಗೆ ಅನುಷ್ಠಾನಗೊಳಿಸುವುದು.

2.3 ವಿವಿಧ ಬಗೆಯ ತರಬೇತಿಗಳು, ಕಾರ್ಯಾಗಾರಗಳು ಮತ್ತು ಶೈಕ್ಷಣಿಕ ಪ್ರವಾಸಗಳನ್ನು ಆಯೋಜಿಸುವಾಗ ಜಿಪಿಎಲ್‌ಎಫ್‌ನ ಸದಸ್ಯರುಗಳಿಗೆ ಆದ್ಯತೆ ನೀಡುವುದು.

2.4 ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳಿಂದ ಅನುಕೂಲ ಪಡೆದ ಅರ್ಹ ಫಲಾನುಭವಿಗಳ ಮಾಹಿತಿಯನ್ನು ಜಿಲ್ಲಾ ಮತ್ತು ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕಗಳಿಗೆ ಆಗಿಂದ್ದಾಗ್ಗೆ ಒದಗಿಸುವುದು.

**3. ಒಗ್ಗೂಡಿಸುವಿಕೆಯಡಿ ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆಗಳು ಅನುಸರಿಸಬಹುದಾದ ಕಾರ್ಯತಂತ್ರ**

3.1 ಇಲಾಖೆಯಡಿ ಅನುಷ್ಠಾನಗೊಳಿಸುವ ವಿವಿಧ ಕಾರ್ಯಕ್ರಮಗಳ ವಿಸ್ತರಣಾ ಚಟುವಟಿಕೆಗಳಿಗೆ ಕೃಷಿ ಸಖಿ, ಪಶು ಸಖಿ, ಮತ್ಸ್ಯ ಸಖಿ ಹಾಗೂ ಇನ್ನಿತರೆ ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು.

3.2 ಇಲಾಖಾ ವತಿಯಿಂದ ಹಮ್ಮಿಕೊಳ್ಳುವ ವಿವಿಧ ಬಗೆಯ ಪ್ರಾತ್ಯಕ್ಷಿಕೆಗಳನ್ನು ಜಿಪಿಎಲ್‌ಎಫ್‌ನ ಸಹಯೋಗದೊಂದಿಗೆ ಅನುಷ್ಠಾನಗೊಳಿಸುವುದು.

3.3 ವಿವಿಧ ಬಗೆಯ ತರಬೇತಿಗಳು, ಕಾರ್ಯಾಗಾರಗಳು ಮತ್ತು ಶೈಕ್ಷಣಿಕ ಪ್ರವಾಸಗಳನ್ನು ಆಯೋಜಿಸುವಾಗ ಜಿಪಿಎಲ್‌ಎಫ್‌ನ ಸದಸ್ಯರುಗಳಿಗೆ ಆದ್ಯತೆ ನೀಡುವುದು.

3.4 ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳಿಂದ ಅನುಕೂಲ ಪಡೆದ ಅರ್ಹ ಫಲಾನುಭವಿಗಳ ಮಾಹಿತಿಯನ್ನು ಜಿಲ್ಲಾ ಮತ್ತು ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕಗಳಿಗೆ ಆಗಿಂದ್ದಾಗ್ಗೆ ಒದಗಿಸುವುದು.

**4. ಒಗ್ಗೂಡಿಸುವಿಕೆಯಡಿ ರಾಜ್ಯದ ಕೃಷಿ ವಿಶ್ವ ವಿದ್ಯಾನಿಲಯಗಳು, ತೋಟಗಾರಿಕೆ ವಿಶ್ವ ವಿದ್ಯಾನಿಲಯ ಮತ್ತು ಕರ್ನಾಟಕ ಪಶು ವೈದ್ಯಕೀಯ ಪ್ರಾಣಿ ಮತ್ತು ಮೀನುಗಾರಿಕೆ ವಿಜ್ಞಾನಗಳ ವಿಶ್ವ ವಿದ್ಯಾನಿಲಯಗಳ ಕಾರ್ಯತಂತ್ರ:**

**4.1** ಕೃಷಿ ಜೀವನೋಪಾಯ ವಿಭಾಗದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ರಾಜ್ಯ, ಜಿಲ್ಲಾ, ತಾಲ್ಲೂಕು ಮತ್ತು ಸಮೂಹ ಮಟ್ಟದ ತಾಂತ್ರಿಕ ಸಿಬ್ಬಂದಿಗಳಿಗೆ ಅಗತ್ಯತೆಗೆ ಅನುಗುಣವಾಗಿ ತರಬೇತಿ ನೀಡುವುದು.

4.2 ತಾಂತ್ರಿಕ ಜ್ಞಾನ ನಿರ್ವಹಣಾ ಸಲಹೆಗಾರರಾಗಿ ಬೆಂಬಲ ನೀಡುವುದು (ಐಇಸಿ. ಪಿಓಪಿ, ವಿಸ್ತರಣಾ ಸೇವೆ, ಪ್ರಾತ್ಯಕ್ಷಿಕೆಗಳು ಮತ್ತು ಇನ್ನಿತರೆ)

4.3 ಕೃಷಿ ಜೀವನೋಪಾಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳಿಗೆ (ಕೃಷಿ ಸಖಿ, ಪಶುಸಖಿ, ವನಸಖಿ, ಮತ್ಸ್ಯ ಸಖಿ ಮತ್ತು ಮಧು ಸಖಿ) ತಾಂತ್ರಿಕ ಜ್ಞಾನ ಹೆಚ್ಚಿಸಲು ವಿವಿಧ ಬಗೆಯ ತರಬೇತಿ/

ಕಾರ್ಯಾಗಾರಗಳನ್ನು ಹಮ್ಮಿಕೊಳ್ಳಲು ಅಗತ್ಯ ಸಂಪನ್ಮೂಲಗಳನ್ನು ಬೆಂಬಲ ವಿಸ್ತರಿಸುವುದು.

4.4 ಮಹಿಳಾ ರೈತರಿಗೆ ಸಾವಯವ ಕೃಷಿ ಪದ್ಧತಿ, ಸಮಗ್ರ ಕೃಷಿ ಪದ್ಧತಿ, ಶೂನ್ಯ ಬಂಡವಾಳ ಕೃಷಿ, ಜಾನುವಾರು ಸಾಕಾಣಿಕೆ, ಶೈಕ್ಷಣಿಕ ಪ್ರವಾಸ ಹಾಗೂ ಇನ್ನಿತರೆ ತಾಂತ್ರಿಕ ವಿಷಯಗಳ ಬಗ್ಗೆ ತರಬೇತಿ ಆಯೋಜಿಸುವುದು.

4.5 ಕೃಷಿ ವಿಜ್ಞಾನ ಕೇಂದ್ರಗಳಲ್ಲಿ ದೊರಕುವ ಎಲ್ಲಾ ಬಗೆಯ ಸೇವೆಗಳನ್ನು ಮಹಿಳಾ ರೈತರಿಗೆ ವಿಸ್ತರಿಸುವುದು.

**5. ಒಗ್ಗೂಡಿಸುವಿಕೆಯಡಿ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಅನುಸರಿಸಬಹುದಾದ ಕಾರ್ಯತಂತ್ರ**

5.1 ಇಲಾಖೆಯಡಿ ಅನುಷ್ಠಾನಗೊಳಿಸುವ ವಿವಿಧ ಕಾರ್ಯಕ್ರಮಗಳ ವಿಸ್ತರಣಾ ಚಟುವಟಿಕೆಗಳಿಗೆ ಕೃಷಿ ಸಖಿ, ವನ ಸಖಿ ಹಾಗೂ ಇನ್ನಿತರೆ ಸ್ಥಳೀಯ ಸಮುದಾಯ ಸಂಪನ್ಮೂಲ ವ್ಯಕ್ತಿಗಳ ಸೇವೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳುವುದು.

5.2 ಇಲಾಖಾ ವತಿಯಿಂದ ಹಮ್ಮಿಕೊಳ್ಳುವ ವಿವಿಧ ಬಗೆಯ ಚಟುವಟಿಕೆ / ಕಾರ್ಯಕ್ರಮಗಳನ್ನು ಜಿಪಿಎಲ್‌ಎಫ್‌ನ ಸಹಯೋಗದೊಂದಿಗೆ ಅನುಷ್ಠಾನಗೊಳಿಸಬಹುದು.

5.3 ಅರಣ್ಯ ಸಸ್ಯ ಕ್ಷೇತ್ರಗಳ ಅಭಿವೃದ್ಧಿ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನು ಸ್ವಸಹಾಯ ಗುಂಪಿನ ಸದಸ್ಯರುಗಳಿಗೆ ವಹಿಸಿಕೊಡಬಹುದಾಗಿದೆ.

5.4 ವಿವಿಧ ಬಗೆಯ ತರಬೇತಿಗಳು, ಕಾರ್ಯಾಗಾರಗಳು ಮತ್ತು ಶೈಕ್ಷಣಿಕ ಪ್ರವಾಸಗಳನ್ನು ಆಯೋಜಿಸುವಾಗ ಜಿಪಿಎಲ್‌ಎಫ್‌ನ ಸದಸ್ಯರುಗಳಿಗೆ ಆದ್ಯತೆ ನೀಡುವುದು.

5.5 ಇಲಾಖೆಯ ವತಿಯಿಂದ ಅನುಷ್ಠಾನಗೊಳಿಸುವ ಕಾರ್ಯಕ್ರಮಗಳಿಂದ ಅನುಕೂಲ ಪಡೆದ ಅರ್ಹ ಫಲಾನುಭವಿಗಳ ಮಾಹಿತಿಯನ್ನು ಜಿಲ್ಲಾ ಮತ್ತು ತಾಲ್ಲೂಕು ಅಭಿಯಾನ ನಿರ್ವಹಣಾ ಘಟಕಗಳಿಗೆ ಆಗಿಂದ್ದಾಗ್ಗೆ ಒದಗಿಸುವುದು.

**6. ಒಗ್ಗೂಡಿಸುವಿಕೆಯಡಿ ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯಡಿ ಅನುಸರಿಸಬಹುದಾದ ಕಾರ್ಯತಂತ್ರ.**

6.1 ವೈಯಕ್ತಿಕ ಆಸ್ತಿ ಸೃಜನೆ (ಕೃಷಿ, ತೋಟಗಾರಿಕೆ, ರೇಷ್ಮೆ, ಪಶುಸಂಗೋಪನೆ ಮತ್ತು ಅರಣ್ಯ).

6.2 ಎಸ್‌ಹೆಚ್‌ಜಿ ವರ್ಕ್‌ಶೆಡ್ ನಿರ್ಮಾಣ.

6.3 ಕಿರು ಕೃಷಿ ಯಂತ್ರೋಪಕರಣ ಬಾಡಿಗೆ ಆಧಾರಿತ ಸೇವಾ ಕೇಂದ್ರಗಳ ವರ್ಕ್‌ಶೆಡ್ ನಿರ್ಮಾಣ

6.4 ಸಸ್ಯ ಕ್ಷೇತ್ರಗಳ ಸ್ಥಾಪನೆ ಮತ್ತು ನಿರ್ವಹಣೆ.